## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 89
2. ಮಾನ್ಯ ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 04.03.2025
4. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2022-23ನೇ ಹಂಗಾಮಿನಲ್ಲಿ ಪ್ರತಿ ಮೆ.ಟನ್‌ಗೆ ಎಫ್‌ಆರ್‌ಪಿ ದರಕ್ಕೆ ಮೇಲ್ಪಟ್ಟು ಪ್ರತಿ ಟನ್‌ಗೆ ರೂ.100 ರಂತೆ ಹಾಗೂ ಎಥೆನಾಲ್ ಘಟಕಗಳನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ರೂ.50ರಂತೆ ಹೀಗೆ ಒಟ್ಟು ರೂ.150 ಗಳನ್ನು ಪಾವತಿಸುವಂತೆ ಸರ್ಕಾರ ಆದೇಶ ಹೊರಡಿಸಿತ್ತು. ಆದರೆ, ಈವರೆವಿಗೂ ಹೆಚ್ಚುವರಿ ಬೆಲೆ ರೈತರಿಗೆ ಪಾವತಿ ಆಗಿಲ್ಲ. ಈ ಕುರಿತು ಸರ್ಕಾರದ ಕ್ರಮವೇನು; | 2022-23 ನೇ ಹಂಗಾಮಿನಲ್ಲಿ, ಎಥನಾಲ್ ಘಟಕಗಳನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು ಪ್ರತಿ ಮೆ.ಟನ್‌ಗೆ ಎಫ್.ಆರ್.ಪಿ ದರಕ್ಕೂ ಮೇಲ್ಪಟ್ಟು ಹೆಚ್ಚುವರಿ ರೂ.150.00 ರಂತೆ ಮತ್ತು ಎಥನಾಲ್ ಘಟಕಗಳನ್ನು ಹೊಂದಿಲ್ಲದ ಸಕ್ಕರೆ ಕಾರ್ಖಾನೆಗಳು ಎಫ್ .ಆರ್.ಪಿ ದರಕ್ಕೂ ಮೇಲ್ಪಟ್ಟು ಹೆಚ್ಚುವರಿ ರೂ.100.00ರಂತೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:05.12.2022 ಹಾಗೂ ದಿನಾಂಕ:29.12.2022 ರ ಆದೇಶಗಳಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ನಿರ್ದೇಶಿಸಲಾಗಿತ್ತು.<br><br>ಮೇಲ್ಕಂಡ ಆದೇಶಗಳನ್ನು ಪ್ರಶ್ನಿಸಿ, ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟ (ಸಿಸ್ಮಾ), ಬೆಂಗಳೂರು ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿದ್ದರು {ರಿಟ್ ಅರ್ಜಿ ಸಂಖ್ಯೆ: 23741 OF 2022, 24601 OF 2022 ಮತ್ತು 24713 OF 2022}. ಸದರಿ ರಿಟ್ ಅರ್ಜಿಗಳಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:06.10.2023 ರಂದು ಆದೇಶವನ್ನು ನೀಡಿದ್ದು, ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದ ಆದಾಯ ಪ್ರಾಪ್ತಿ ಅಂಕಿ ಅಂಶಗಳನ್ನು ಕ್ರೋಢೀಕರಿಸಿ ಕರ್ನಾಟಕ ಕಬ್ಬು (ಸರಬರಾಜು ನಿಯಂತ್ರಣ) ತಿದ್ದುಪಡಿ ಅಧಿನಿಯಮ 2014 ಕಲಂ 4(ಸಿ)ರನ್ವಯ ತಜ್ಞರ ಸಮಿತಿ ಮುಂದೆ ಮಂಡಿಸಲು ಹಾಗೂ ಈ ವಿಷಯದಲ್ಲಿ ಕಬ್ಬು ನಿಯಂತ್ರಣ ಮಂಡಳಿಯ ನಿರ್ಣಯದಂತೆ ನಿಯಮಾನುಸಾರ ಕ್ರಮ ಕೈಗೊಳ್ಳಲು ಆದೇಶಿಸಿರುತ್ತದೆ.<br><br>ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ರಾಜ್ಯದ 74 ಸಕ್ಕರೆ ಕಾರ್ಖಾನೆಗಳ ಆದಾಯ ಪ್ರಾಪ್ತಿಗಳ ಅಂಕಿ ಅಂಶಗಳನ್ನು ಕ್ರೂಢೀಕರಿಸಿ ವಿಶ್ಲೇಷಣೆ ಮಾಡಲಾಗಿದೆ. ಇದರಲ್ಲಿ ವಾಸ್ತವಿಕವಾಗಿ ಸಕ್ಕರೆ, ಬಗ್ಯಾಸ್, ಕಾಕಂಬಿ ಮತ್ತು ಪ್ರೆಸ್‌ಮಡ್ ಇವುಗಳ ಮಾರಾಟದಿಂದ ವಾಸ್ತವವಾಗಿ ಪ್ರಾಪ್ತವಾಗಿರುವ ಆದಾಯಗಳ ವಿವರಗಳನ್ನು ಕ್ರೋಢೀಕರಿಸಿ ಪ್ರತಿ ಕಾರ್ಖಾನೆಗೆ ಪ್ರಾಪ್ತವಾಗಿರುವ ಒಟ್ಟು ಆದಾಯದ ಶೇ.70 ರಷ್ಟು ಆದಾಯವನ್ನು ಕಬ್ಬಿನ ದರವೆಂದು ಪರಿಗಣಿಸಿ, ಕೇಂದ್ರ ಸರ್ಕಾರವು ಘೋಷಿಸಿದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಗೆ ಹೋಲಿಸಿ ಪರಿಶೀಲಿಸಲಾಗಿದೆ. |

<table>
<tr>
<td>(ಆ)</td>
<td>ಸದರಿ ವಿಷಯ ಕುರಿತು ಘನ ಉಚ್ಚ ನ್ಯಾಯಾಲಯದ ಆದೇಶದಂತೆ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳ ಆದಾಯ ಪ್ರಾಪ್ತಿ ಅಂಕಿ-ಅಂಶಗಳನ್ನು ಕ್ರೋಢೀಕರಿಸಲಾಗಿದೆಯೇ?<br>ಹಾಗೂ, ತಜ್ಞರ ಸಮಿತಿ ಹಾಗೂ ಕಬ್ಬು ನಿಯಂತ್ರಣ ಮಂಡಳಿ ಸಭೆಯಲ್ಲಿ ಮಂಡಿಸಲಾಗಿದೆಯೇ;<br>(ಈ ಬಗ್ಗೆ ಸಂಪೂರ್ಣ ವಿವರ ನೀಡುವುದು)</td>
<td rowspan="2">74 ಸಕ್ಕರೆ ಕಾರ್ಖಾನೆಗಳ ಆದಾಯ ಪ್ರಾಪ್ತಿಗಳನ್ನು ಪರಿಶೀಲಿಸಿದಾಗ ಕೆಳಕಂಡ ಐದು ಸಕ್ಕರೆ ಕಾರ್ಖಾನೆಗಳು ಮಾತ್ರ ಎಫ್.ಆರ್.ಪಿ. ಬೆಲೆಗಿಂತ ಹೆಚ್ಚಿಗೆ ನೀಡಲು ಅವಕಾಶವಿರುತ್ತದೆ.
<table>
<tr><th>ಕ್ರ.ಸಂ</th><th>ಕಾರ್ಖಾನೆಯ ಹೆಸರು</th><th>ಪ್ರತಿ ಮೆ.ಟನ್ನಿಗೆ ಪಾವತಿಸಬೇಕಾದ ಹೆಚ್ಚುವರಿ ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕಾಕತಿ, ಬೆಳಗಾವಿ ಜಿಲ್ಲೆ</td><td>253</td></tr>
<tr><td>2</td><td>ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ., ಹಳಿಯಾಳ ಉತ್ತರ ಕನ್ನಡ ಜಿಲ್ಲೆ</td><td>119</td></tr>
<tr><td>3</td><td>ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರನ್ನನಗರ, ಬಾಗಲಕೋಟೆ ಜಿಲ್ಲೆ</td><td>53</td></tr>
<tr><td>4</td><td>ಶ್ರೀ.ಕೇದಾರನಾಥ ಶುಗರ್ಸ್ ಅಂಡ್ ಅಗ್ರೋ ಪ್ರಾಡಕ್ಟ್ಸ ಲಿ., ಬಾದಾಮಿ, ಬಾಗಲಕೋಟೆ ಜಿಲ್ಲೆ</td><td>21</td></tr>
<tr><td>5</td><td>ಕೋರಮಂಡಲ್ ಶುಗರ್ಸ ಲಿ., ಮಾಕವಳ್ಳಿ, ಮಂಡ್ಯ ಜಿಲ್ಲೆ</td><td>08</td></tr>
</table>
ಈ ಮೇಲಿನ ಎಲ್ಲಾ ವಿವರಗಳನ್ನು ದಿನಾಂಕ:29.06.2024 ರಂದು ಜರುಗಿದ ಕಬ್ಬು ನಿಯಂತ್ರಣ ಮಂಡಳಿ ಸಭೆಗೆ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಆದಾಯ ಪ್ರಾಪ್ತಿಯ ವಿವರಗಳ ವರದಿಗಳನ್ನು ನೀಡಲು 4-ಸಿ ಸಮಿತಿ ಸಭೆಯನ್ನು ಜರುಗಿಸಿ ವರದಿಯನ್ನು ಪುನಃ ಕಬ್ಬು ನಿಯಂತ್ರಣ ಮಂಡಳಿಗೆ ಮಂಡಿಸುವಂತೆ ನಿರ್ಣಯಿಸಲಾಗಿತ್ತು.<br><br>ದಿನಾಂಕ:25.07.2024 ರಂದು ಜರುಗಿದ 4-ಸಿ ಸಮಿತಿ ಸಭೆಯಲ್ಲಿ ಈ ವಿಷಯವನ್ನು ಸುಧೀರ್ಘವಾಗಿ ಚರ್ಚಿಸಲಾಯಿತು. ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2014 ರ 4(ಡಿ) ರಲ್ಲಿರುವಂತೆ ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ದೇಶಿಸಲು ಪರಿಗಣಿಸಬೇಕಾದ ಅಂಶಗಳು ಅಂದರೆ ಕಬ್ಬಿನಿಂದ ವಾಸ್ತವವಾಗಿ ಪ್ರಾಪ್ತವಾದ ಆದಾಯ ಮತ್ತು ಸಕ್ಕರೆ ಉತ್ಪಾದನೆ ಹಾಗೂ ಅದರ ಉತ್ಪತ್ತಿ ಅಂದರೆ ಕಬ್ಬಿನ ಸಿಪ್ಪೆ, ಕಾಕಂಬಿ, ಪ್ರೆಸ್‌ಮಡ್ ಮತ್ತು ಯಾವುದೇ ಇತರ ಉತ್ಪನ್ನದ ಉತ್ಪಾದನೆಗಾಗಿ ನೇರವಾಗಿ ಬಳಸಲಾದ ಕಬ್ಬಿನ ರಸ ಇವುಗಳ ಮಾರಾಟ ಮಾಡಿರದಿದ್ದಾಗ್ಯೂ ಮಾರಾಟಗಳು ಪ್ರಾರಂಭದ ಮತ್ತು ಮುಕ್ತಾಯದ ದಾಸ್ತಾನು ಪರಿಗಣಿಸಲು ಅವಕಾಶವಿರುತ್ತದೆ. ಕಾರ್ಖಾನೆಗಳು ಸದರಿ ಹಂಗಾಮಿಗೆ ಉತ್ಪಾದಿಸಿದ ಎಥನಾಲ್ ಮಾರಾಟದ ಬೆಲೆಯನ್ನು ಕೂಡಾ ಪರಿಗಣಿಸಲು ಅವಕಾಶವಿರುತ್ತದೆ.<br>ಈ ಹಿನ್ನಲೆಯಲ್ಲಿ 2022-23 ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳು ಸಲ್ಲಿಸುವ ಆರ್.ಟಿ.8(ಸಿ) ಯಲ್ಲಿ ದಾಖಲಿಸಿದಂತೆ ನೇರವಾಗಿ ಕಬ್ಬಿನ ಜ್ಯೂಸ್‌ನಿಂದ ಎಥನಾಲ್ ಉತ್ಪಾದಿಸುತ್ತಿರುವ ಸಕ್ಕರೆ ಕಾರ್ಖಾನೆಗಳ ಆದಾಯ ಪ್ರಾಪ್ತಿಯನ್ನು ಹಾಗೂ</td>
</tr>
<tr>
<td>(ಇ)</td>
<td>ರೈತರಿಗೆ ಹೆಚ್ಚುವರಿ ಮೊತ್ತ ಪಾವತಿಸಲು ಕಬ್ಬು ನಿಯಂತ್ರಣ ಮಂಡಳಿ ಸಭೆಯಲ್ಲಿ ತೀರ್ಮಾನ ಆಗಿದೆಯೇ: ಇಲ್ಲದಿದ್ದಲ್ಲಿ, ಕಾರಣಗಳೇನು: ಹಾಗೂ ಇದರಿಂದ ಎಷ್ಟು ಮಂದಿ ರೈತರಿಗೆ ಪ್ರಯೋಜನ ದೊರೆಯಲಿದೆ;<br>ಪಾವತಿಸಬಹುದಾದ ಅಂದಾಜು ಹೆಚ್ಚುವರಿ ಒಟ್ಟು ಮೊತ್ತ ಎಷ್ಟು;</td>
</tr>
</table>

| | | |
|---|---|---|
| | | ಕಾರ್ಖಾನೆಗಳು ಎಥನಾಲ್ ಘಟಕಗಳಿಗೆ ಪೂರೈಸಿದ ಸಿರಪ್, ಬಿ-ಹೆವಿ ಹಾಗೂ ಸಿ-ಹೆವಿ ಕಾಕಂಬಿಯ ಮಾಹಿತಿಯನ್ನು ರಾಜ್ಯದ ಕಾರ್ಖಾನೆಗಳಿಂದ ಪಡೆದು ಆದಾಯವನ್ನು ಮರು ಪರಿಶೀಲಿಸಿ ತ್ವರಿತವಾಗಿ ವರದಿಯನ್ನು ಪಡೆಯಲು ನಿರ್ಣಯಿಸಲಾಗಿತ್ತು.<br>ದಿನಾಂಕ:28.11.2024 ರಂದು ಜರುಗಿದ 4(ಸಿ) ಸಮಿತಿ ಸಭೆಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳ 2022-23 ನೇ ಹಂಗಾಮಿನಲ್ಲಿ ಪಡೆದಿರುವ ಆದಾಯ ಹಂಚಿಕೆ ಅಂಕಿಅಂಶಗಳ ವಿವರಗಳನ್ನು ಪುನಃ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ 74 ಸಕ್ಕರೆ ಕಾರ್ಖಾನೆಗಳ ಆದಾಯ ಪ್ರಾಪ್ತಿಗಳನ್ನು ಪುನರ್ ಪರಿಶೀಲಿಸಿದಾಗ 12 ಸಕ್ಕರೆ ಕಾರ್ಖಾನೆಗಳು ಎಫ್.ಆರ್.ಪಿ. ಬೆಲೆಗಿಂತ ಹೆಚ್ಚಿಗೆ ನೀಡಲು ಅವಕಾಶವಿರುತ್ತದೆ. ಈ ಕಾರ್ಖಾನೆಗಳು ಹೆಚ್ಚುವರಿ ಮೊತ್ತವನ್ನು ರೈತರಿಗೆ ಪಾವತಿಸಬೇಕಾಗಿರುತ್ತದೆ. ವಿವರವಾದ ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br>ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಸದರಿ ವಿಷಯವಾಗಿ ದಿನಾಂಕ:29.06.2024 ಮತ್ತು 29.11.2024 ರಂದು ನಡೆದ ಕಬ್ಬು ನಿಯಂತ್ರಣ ಮಂಡಳಿ ಸಭೆಗಳಲ್ಲಿ ಚರ್ಚಿಸಲಾಗಿದೆ. ಈ ಸಂಬಂಧ ಮುಂದಿನ ಸಭೆಯಲ್ಲಿ ನಿರ್ಣಯಿಸಲಾಗುವುದು. |
| **(ಈ)** | ರಾಜ್ಯದಲ್ಲಿ ಎಥೆನಾಲ್ ಘಟಕ ಹೊಂದಿರುವ ಮತ್ತು ಹೊಂದಿಲ್ಲದಿರುವ ಸಕ್ಕರೆ ಕಾರ್ಖಾನೆಗಳ ಯಾವುವು? (ಕಾರ್ಖಾನೆವಾರು ಕಬ್ಬು ನುರಿಸುವ ಸಾಮರ್ಥ್ಯ ಮತ್ತು ಡಿಸ್ಟಿಲರಿ ಸಾಮರ್ಥ್ಯದ ವಿವರ ನೀಡುವುದು) | ರಾಜ್ಯದಲ್ಲಿ 41 ಸಕ್ಕರೆ ಕಾರ್ಖಾನೆಗಳು ಎಥೆನಾಲ್ ಘಟಕಗಳನ್ನು ಹೊಂದಿರುತ್ತದೆ ಮತ್ತು 40 ಸಕ್ಕರೆ ಕಾರ್ಖಾನೆಗಳಲ್ಲಿ ಎಥೆನಾಲ್ ಘಟಕಗಳನ್ನು ಹೊಂದಿರುವುದಿಲ್ಲ. ರಾಜ್ಯದ ಸಕ್ಕರೆ ಕಾರ್ಖಾನೆಗಳ ಕಬ್ಬು ಅರೆಯುವ ಸಾಮರ್ಥ್ಯ ಮತ್ತು ಡಿಸ್ಟಲರಿ / ಎಥೆನಾಲ್ ಉತ್ಪಾದಿಸುವ ಸಾಮರ್ಥ್ಯದ ಮಾಹಿತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |

**ಸಂಖ್ಯೆ :** ಸಿಐ 26 ಎಸ್‌ಜಿಎಫ್ 2025

(ಶಿವಾನಂದ ಎಸ್ ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 27(89) ಕ್ಕೆ ಅನುಬಂಧ-1**

2022-23ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳು ರೈತರಿಗೆ ಎಫ್ ಆರ್‌ಪಿ ದರಕ್ಕಿಂತ ಮೇಲ್ಪಟ್ಟು ಪಾವತಿಸಬೇಕಾದ ಹೆಚ್ಚುವರಿ ಮೊತ್ತದ ವಿವರಗಳು ಈ ಕೆಳಗಿನಂತಿದೆ.

| | | | ಎಫ್ ಆರ್‌ಪಿ ದರಕ್ಕಿಂತ ಮೇಲ್ಪಟ್ಟು | | | | |
|---|---|---|---|---|---|---|---|
| ಕ್ರ.ಸಂ | ಕಾರ್ಖಾನೆಯ ಹೆಸರು | ಕಬ್ಬು ನುರಿಸಿರುವ ಪ್ರಮಾಣ (ಮೆ.ಟನ್) | ಪ್ರತಿ ಮೆ.ಟನ್ನಿಗೆ ಪಾವತಿಸಬೇಕಾದ ಹೆಚ್ಚುವರಿ ದರ (ರೂ.ಗಳಲ್ಲಿ) | ಪಾವತಿಸಬೇಕಾದ ಹೆಚ್ಚುವರಿ ಮೊತ್ತ (ರೂ.ಕೋಟಿಗಳಲ್ಲಿ) | ಪ್ರತಿ ಮೆ.ಟನ್ನಿಗೆ ಈಗಾಗಲೇ ಪಾವತಿಸಿರುವ ಹೆಚ್ಚುವರಿ ದರ (ರೂ.ಗಳಲ್ಲಿ) | ಈಗಾಗಲೇ ಪಾವತಿಸಿರುವ ಹೆಚ್ಚುವರಿ ಮೊತ್ತ (ರೂ.ಕೋಟಿಗಳಲ್ಲಿ) | ಪಾವತಿಸಬೇಕಾದ ಹೆಚ್ಚುವರಿ ಮೊತ್ತ (ರೂ. ಕೋಟಿಗಳಲ್ಲಿ) |
| 1 | ಜೆಮ್ ಶುಗರ್ಸ ಲಿ., ಕುಂದರಗಿ, ಬಾಗಲಕೋಟೆ | 824270 | 96/- | 7.91 | 0 | 0 | 7.91 |
| 2 | ಗೋದಾವರಿ ಬಯೋ ರಿಫೈನರಿಸ್ ಲಿ., ಸಮೀರವಾಡಿ, ಬಾಗಲಕೋಟೆ | 2096053 | 24/- | 5.03 | 0 | 0 | 5.03 |
| 3 | ಮೈಲಾರ ಶುಗರ್ಸ್ ಲಿ., ಬಳ್ಳಾರಿ | 504683 | 31/- | 1.56 | 0 | 0 | 1.56 |
| 4 | ಶಾಮನೂರು ಶುಗರ್ಸ್ ಲಿ., ದುಗ್ಗಾವತಿ, ವಿಜಯನಗರ | 422713 | 101/- | 4.27 | 167 | 7.06 | 0 |
| 5 | ದಾವಣಗೆರೆ ಶುಗರ್ಸ್ ಲಿ., ಕುಕ್ಕುವಾಡ, ದಾವಣಗೆರೆ | 482453 | 58/- | 2.8 | 0 | 0 | 2.8 |
| 6 | ಉಗಾರ್ ವರ್ಕ್ಸ್ ಲಿ., ಉಗಾರ ಖುರ್ದ, ಬೆಳಗಾವಿ | 1958609 | 07/- | 1.37 | 0 | 0 | 1.37 |
| 7 | ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ., ಹುಲ್ಲಟ್ಟಿ, ಹಳಿಯಾಳ, ಉತ್ತರ ಕನ್ನಡ | 1018382 | 112/- | 11.41 | 0 | 0 | 0 |
| 8 | ಇಂಡಿಯನ್ ಶುಗರ್ಸ್ ಮ್ಯಾನುಫ್ಯಾಕ್ಚರಿಂಗ್ ಲಿ., ಹಾವಿನಾಳ, ವಿಜಯಪುರ | 404096 | 46/- | 1.86 | 198 | 8 | 0 |
| 9 | ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರನ್ನನಗರ | 402085 | 116/- | 4.66 | 213 | 8.56 | 0 |
| 10 | ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕಾಕತಿ | 172346 | 257/- | 4.43 | 0 | 0 | 4.43 |
| 11 | ಜಿ.ಎಂ. ಶುಗರ್ಸ್ ಮತ್ತು ಎನರ್ಜಿ ಲಿ., ಸಂಗೂರು, ಹಾವೇರಿ | 526832 | 31/- | 1.63 | 25 | 1.32 | 0.32 |
| 12 | ಕೋರಮಂಡಲ್ ಶುಗರ್ಸ ಲಿ., ಮಾಕವಳ್ಳಿ | 703184 | 29/- | 2.04 | 0 | 0 | 2.04 |
| | | | | | | ಒಟ್ಟು | **25.46** |

ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 27(89) ಕ್ಕೆ ಅನುಬಂಧ-2

---

**ರಾಜ್ಯದ ಸಕ್ಕರೆ ಕಾರ್ಖಾನೆಗಳ ಕಬ್ಬು ಅರೆಯುವ ಸಾಮರ್ಥ್ಯ ಮತ್ತು ಡಿಸ್ಟಲರಿ / ಎಥೆನಾಲ್ ಉತ್ಪಾದಿಸುವ ಸಾಮರ್ಥ್ಯದ ವಿವರಗಳು**

| ಕ್ರ. ಸಂ | ಕಾರ್ಖಾನೆಯ ಹೆಸರು | ದಿನವಹಿ ಕಬ್ಬು ಅರೆಯುವ ಸಾಮರ್ಥ್ಯ(ಟಿಸಿಡಿ) | ದಿನವಹಿ ಡಿಸ್ಟಲರಿ / ಎಥೆನಾಲ್ ಉತ್ಪಾದಿಸುವ ಸಾಮರ್ಥ್ಯ (ಕೆಎಲ್‌ಪಿಡಿ) |
|---|---|---|---|
| | **ಬೆಳಗಾವಿ ಜಿಲ್ಲೆ** | | |
| 1 | ಅರಿಹಂತ ಶುಗರ್ಸ್ ಇಂಡಸ್ಟ್ರಿಸ್ ಲಿ., ಜೈನಾಪುರ, ತಾಲ್ಲೂಕು: ಚಿಕ್ಕೋಡಿ, ಜಿಲ್ಲೆ: ಬೆಳಗಾವಿ. | 2500 | Nil |
| 2 | ಅಥಣಿ ಶುಗರ್ಸ್ ಲಿ., ವಿಷ್ಣು ಅಣ್ಣಾನಗರ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 10500 | 90.00 |
| 3 | ಬೆಳಗಾಂ ಶುಗರ್ಸ್ ಪ್ರೈ ಲಿ, ಹುದಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ: ಬೆಳಗಾವಿ | 7500 | Nil |
| 4 | ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿ, ಶಾಂತಪ್ಪನ ಮಿರ್ಜಿ ನಗರ, ತಾಲ್ಲೂಕು: ಚಿಕ್ಕೋಡಿ, ಜಿಲ್ಲೆ: ಬೆಳಗಾವಿ. | 10000 | 230.00 |
| 5 | ಇ.ಐ.ಡಿ ಪ್ಯಾರಿ (ಇಂಡಿಯಾ) ಲಿಮಿಟೆಡ್, ಖಾನಪೇಟ್, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ. (ಧನಲಕ್ಷ್ಮಿ ಸಹಕಾರಿ ಸಕ್ಕರೆ ಲಿಮಿಟೆಡ್ ಗುತ್ತಿಗೆದಾರರು) | 5000 | Nil |
| 6 | ದಿ. ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗೋಕಾಕ್, ಜಿಲ್ಲೆ: ಬೆಳಗಾವಿ. | 2200 | Nil |
| 7 | ಗೋಕಾಕ್ ಶುಗರ್ಸ್ ಲಿ., ಕೊಳವಿ, ತಾಲ್ಲೂಕು: ಗೋಕಾಕ್, ಜಿಲ್ಲೆ: ಬೆಳಗಾವಿ. | 2500 | Nil |
| 8 | ಶ್ರೀ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಶಂಕರಾನಂದ ನಗರ, ನಿಪ್ಪಾಣಿ, ಜಿಲ್ಲೆ: ಬೆಳಗಾವಿ. | 8500 | 150.00 |
| 9 | ಹರ್ಷ ಶುಗರ್ಸ್ ಲಿ., ತಾಲ್ಲೂಕು: ಸವದತ್ತಿ, ಜಿಲ್ಲೆ: ಬೆಳಗಾವಿ. | 7500 | 60.00 |
| 10 | ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಕೇಶ್ವರ, ಜಿಲ್ಲೆ: ಬೆಳಗಾವಿ. | 8000 | 54.00 |
| 11 | ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಪೋಸ್ಟ್:ಸಂಕೋನಟ್ಟಿ, ತಾಲ್ಲೂಕು:ಅಥಣಿ, ಜಿಲ್ಲೆ: ಬೆಳಗಾವಿ | 5500 | Nil |
| 12 | ಲೈಲಾ ಶುಗರ್ಸ್ ಪ್ರೈ ಲಿ., (ಶ್ರೀ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಗುತ್ತಿಗೆದಾರರು), ಖಾನಾಪುರ, ಜಿಲ್ಲೆ, ಬೆಳಗಾವಿ | 4500 | Nil |
| 13 | ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ, ಜಿಲ್ಲೆ: ಬೆಳಗಾವಿ | 3500 | 30.00 |
| 14 | ಶ್ರೀ ರೇಣುಕಾ ಶುಗರ್ಸ್ ಲಿ., ಯುನಿಟ್-III ಭಾವಚಿ, ಪೋಸ್ಟ್: ಮಕ್ಕಳ್ಳಿ, ತಾಲ್ಲೂಕು: ರಾಯಬಾಗ್, ಜಿಲ್ಲೆ: ಬೆಳಗಾವಿ. | 2500 | Nil |
| 15 | ಶ್ರೀ ರೇಣುಕಾ ಶುಗರ್ಸ್ ಲಿ., ಯುನಿಟ್- 4 ಬುರ್ಲಟ್ಟಿ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 10000 | 300.00 |
| 16 | ಶ್ರೀ ರೇಣುಕಾ ಶುಗರ್ಸ್ ಲಿ., ಯುನಿಟ್- I ಮುನೋಳಿ, ತಾಲ್ಲೂಕು: ಸವದತ್ತಿ, ಜಿಲ್ಲೆ: ಬೆಳಗಾವಿ | 8500 | 500.00 |
| 17 | ಸತೀಶ್ ಶುಗರ್ಸ್ ಲಿ., ಹುಣಶ್ಯಾಳ್ ಗ್ರಾಮ, ತಾಲ್ಲೂಕು: ಗೋಕಾಕ್, ಜಿಲ್ಲೆ: ಬೆಳಗಾವಿ. | 10000 | 300.00 |
| 18 | ಶ್ರೀ ಸಂಗಮ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಿಡಕಲ್‌ಡ್ಯಾಂ, ತಾಲ್ಲೂಕು:ಹುಕ್ಕೇರಿ, ಜಿಲ್ಲೆ: ಬೆಳಗಾವಿ | 2500 | Nil |
| 19 | ಶಿರಗುಪ್ಪಿ ಶುಗರ್ ವರ್ಕ್ಸ್ ಲಿ., ತಾಲ್ಲೂಕು: ಕಾಗವಾಡ, ಜಿಲ್ಲೆ: ಬೆಳಗಾವಿ | 7500 | 120.00 |
| 20 | ಶಿವಶಕ್ತಿ ಶುಗರ್ಸ್ ಲಿಮಿಟೆಡ್, ಸವದತ್ತಿ, ತಾಲ್ಲೂಕು: ರಾಯಬಾಗ, ಜಿಲ್ಲೆ:ಬೆಳಗಾವಿ | 18000 | Nil |
| 21 | ಶ್ರೀ ಶಿವಸಾಗರ ಶುಗರ್ ಅಂಡ್ ಆಗ್ರೋ ಪ್ರಾಡಕ್ಟ್ ಲಿಮಿಟೆಡ್ (ಗುಡಗುಂಟಿ ಶುಗರ್ಸ್ ಅಂಡ್ ಬಯೋಎನರ್ಜಿ ಲಿಮಿಟೆಡ್ ಇದರ ಅಂಗಸಂಸ್ಥೆ), ಉದುಪುಡಿ ಗ್ರಾಮ, ತಾಲ್ಲೂಕು: ರಾಮದುರ್ಗ, ಜಿಲ್ಲೆ: ಬೆಳಗಾವಿ | 4800 | Nil |
| 22 | ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೈಲಹೊಂಗಲ, ಜಿಲ್ಲೆ: ಬೆಳಗಾವಿ | 2500 | Nil |
| 23 | ಸೌಭಾಗ್ಯಲಕ್ಷ್ಮಿ ಶುಗರ್ಸ್, ಹಿರೇನಂದಿ ಗ್ರಾಮ, ತಾಲ್ಲೂಕು ಗೋಕಾಕ್, ಜಿಲ್ಲೆ: ಬೆಳಗಾವಿ | 3500 | Nil |
| 24 | ಶ್ರೀ ಬಸವೇಶ್ವರ ಶುಗರ್ಸ್ ಲಿಮಿಟೆಡ್, ಬಳ್ಳಿಗೇರಿ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 800 | 50 |
| 25 | ದಿ. ಮಾರ್ಕಂಡೇಯಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕಾಕತಿ, ಜಿಲ್ಲೆ ಬೆಳಗಾವಿ | 2500 | Nil |
| 26 | ದಿ ಉಗಾರ್ ಶುಗರ್ ವರ್ಕ್ಸ್ ಲಿ, ಪೋಸ್ಟ್: ಉಗಾರ್‌ಖುರ್ದ್, ಜಿಲ್ಲೆ: ಬೆಳಗಾವಿ | 15000 | 845.00 |
| 27 | ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿ., ಪೋಸ್ಟ್: ಬೇಡಿಕಿಹಾಲ, ತಾಲ್ಲೂಕು: ನಿಪ್ಪಾಣಿ, ಜಿಲ್ಲೆ: ಬೆಳಗಾವಿ. | 12000 | 90.00 |
| 28 | ವಿಶ್ವರಾಜ್ ಶುಗರ್ಸ್ ಲಿಮಿಟೆಡ್., ಬೆಲ್ಲದ-ಬಾಗೇವಾಡಿ, ತಾಲ್ಲೂಕು: ಹುಕ್ಕೇರಿ, ಜಿಲ್ಲೆ: ಬೆಳಗಾವಿ | 11000 | 100.00 |
| 29 | ಇಂಡಿಯನ್ ಕೇನ್ ಪವರ್ ಲಿ. ಘಟಕ: ಅಲಗವಾಡಿ ಬೀರೇಶ್ವರ ಶುಗರ್ಸ್ ಅಲಗವಾಡಿ ಗ್ರಾಮ, ತಾಲ್ಲೂಕು : ರಾಯಬಾಗ, ಜಿಲ್ಲೆ: ಬಾಗಲಕೋಟೆ | 12000 | Nil |
| 30 | ಇನಾಂದಾರ್ ಶುಗರ್ಸ್ ಲಿಮಿಟೆಡ್, ಹಿರೇಕೊಪ್ಪ, ಮಾರಕುಂಬಿ ತಾಲ್ಲೂಕು,:ಸವದತ್ತಿ ಜಿಲ್ಲೆ: ಬೆಳಗಾವಿ | 4900 | Nil |
| | **ಬಾಗಲಕೋಟೆ ಜಿಲ್ಲೆ** | | |
| 31 | ಬಾದಾಮಿ ಶುಗರ್ಸ್ ಲಿಮಿಟೆಡ್, ಮಸ್ಕಿಗೇರಿ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 3500 | Nil |
| 32 | ಬೀಳಗಿ ಶುಗರ್ ಮಿಲ್ ಲಿಮಿಟೆಡ್, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. | 15000 | 200.00 |
| 33 | ಇಐಡಿ ಪ್ಯಾರಿ (ಇಂಡಿಯಾ) ಲಿಮಿಟೆಡ್., ನಾಗರಾಳ, ನೈನಿಗಲಿ, ಬಾಗಲಕೋಟೆ ತಾಲ್ಲೂಕು, & ಜಿಲ್ಲೆ. | 6500 | 90.00 |
| 34 | ಜೆಮ್ ಶುಗರ್ಸ್ ಲಿ., ಕುಂದರಗಿ, ಬೀಳಗಿ, ಬಾಗಲಕೋಟೆ ಜಿಲ್ಲೆ. | 6500 | 90.00 |
| 35 | ಗೋದಾವರಿ ಬಯೋರಿಫೈನರೀಸ್ ಲಿ., ಸಮೀರವಾಡಿ, ಬಾಗಲಕೋಟೆ | 20000 | 600.00 |
| 36 | ಇಂಡಿಯನ್ ಕೇನ್ ಪವರ್ ಲಿ., ಉತ್ತೂರು, ಮುದೋಳ್, ಬಾಗಲಕೋಟೆ ಜಿಲ್ಲೆ. | 24000 | Nil |
| 37 | ಜಮಖಂಡಿ ಶುಗರ್ಸ್ ಲಿಮಿಟೆಡ್, ಹಿರೆಪಡಸಲಗಿ, ಪೋಸ್ಟ್: ನಾಗನೂರು, ತಾಲ್ಲೂಕು: ಜಮಖಂಡಿ, ಜಿಲ್ಲೆ: ಬಾಗಲಕೋಟೆ | 11500 | Nil |

| | | | |
|---|---|---|---|
| | ಮೆಲ್ಕೊ ಶುಗರ್ಸ್ ಲಿಮಿಟೆಡ್, ಶಿರೂರು, ತಾಲ್ಲೂಕು ಮತ್ತು ಜಿಲ್ಲೆ ಬಾಗಲಕೋಟೆ | 5000 | Nil |
| | ಎಂ.ಆರ್.ಎನ್ ಚಾಮುಂಡಿ ಕೇನ್ ಪವರ್ & ಬಯೋರೀಫೈನರೀಸ್ ಪ್ರೈ ಲಿ., ಕಲ್ಲಾಪುರ ಎಸ್.ಕೆ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 5000 | Nil |
| | ನಿರಾಣಿ ಶುಗರ್ಸ್ ಲಿಮಿಟೆಡ್, ಮುದೋಳ ತಾಲ್ಲೂಕು: ಮುದೋಳ ಜಿಲ್ಲೆ: ಬಾಗಲಕೋಟೆ | 20000 | 700.00 |
| | ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ & ಕೆಮಿಕಲ್ಸ್ ಲಿ., ಜಮಖಂಡಿ ತಾಲ್ಲೂಕು, ಜಿಲ್ಲೆ: ಬಾಗಲಕೋಟೆ | 8500 | Nil |
| 2 | ಶ್ರೀ ಕೇದಾರನಾಥ್ ಶುಗರ್ ಅಂಡ್ ಆಗ್ರೋ ಪ್ರಾಡಕ್ಟ್ಸ್ ಲಿಮಿಟೆಡ್, ಕೆರಕಲಮಟ್ಟಿ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 3500 | Nil |
| 3 | ಶ್ರೀ ಸಾಯಿಪ್ರಿಯ ಶುಗರ್ಸ್ ಲಿ., ಹಿಪ್ಪರಗಿ-ಮೈಗೂರ, ತಾಲ್ಲೂಕು: ಜಮಖಂಡಿ ಜಿಲ್ಲೆ: ಬಾಗಲಕೋಟೆ | 15000 | 570.00 |
| | **ಬಳ್ಳಾರಿ ಜಿಲ್ಲೆ** | | |
| 4 | ಎನ್ಎಸ್ಎಲ್ ಶುಗರ್ಸ್ (ತುಂಗಾಭದ್ರಾ) ಲಿಮಿಟೆಡ್., ದೇಶನೂರು, ತಾಲ್ಲೂಕು: ಶಿರಗುಪ್ಪ, ಜಿಲ್ಲೆ: ಬಳ್ಳಾರಿ. | 3500 | Nil |
| | **ಬೀದರ್ ಜಿಲ್ಲೆ** | | |
| 5 | ಭಾಲ್ಕೇಶ್ವರ ಶುಗರ್ಸ್ ಲಿ. ಮಡಕಟ್ಟಿ ಕ್ರಾಸ್, ಬಾಜೋಳಗ, ತಾಲ್ಲೂಕು: ಭಾಲ್ಕಿ, ಜಿಲ್ಲೆ: ಬೀದರ್ | 4000 | 120.00 |
| 46 | ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ ಲಿ., ಮೊಗದಲ್ ಗ್ರಾಮ, ಪೋಸ್ಟ್: ಮಾರಕುಂಡಾ, ತಾಲ್ಲೂಕು ಮತ್ತು ಜಿಲ್ಲೆ ಬೀದರ್ | 3500 | 60.00 |
| 47 | ದಿ ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭಾಲ್ಕಿ, ಬೀದರ್ | 2500 | Nil |
| 48 | ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಮಾಮಪುರ ಗ್ರಾಮ, (ಜನವಾಡ ಹತ್ತಿರ) ತಾಲ್ಲೂಕು & ಜಿಲ್ಲೆ : ಬೀದರ್ | 2500 | Nil |
| 49 | ಶ್ರೀ ಭವಾನಿ ಖಂಡಸಾರಿ ಶುಗರ್ಸ್ ಲಿ, ಬರೂರು ಗ್ರಾಮ, ತಾಲ್ಲೂಕು & ಜಿಲ್ಲೆ ಬೀದರ್. | 1000 | Nil |
| | **ಚಾಮರಾಜನಗರ ಜಿಲ್ಲೆ** | | |
| 50 | ಬನ್ನಾರಿ ಅಮ್ಮನ್ ಶುಗರ್ಸ್ ಲಿ., ಯುನಿಟ್-III, ಕುಂತೂರು ಗ್ರಾಮ, ತಾಲ್ಲೂಕು: ಕೊಳ್ಳೇಗಾಲ, ಜಿಲ್ಲೆ: ಚಾಮರಾಜನಗರ. | 4500 | Nil |
| | **ದಾವಣಗೆರೆ ಜಿಲ್ಲೆ** | | |
| 51 | ದಾವಣಗೆರೆ ಶುಗರ್ಸ್ ಲಿ., ಕುಕ್ಕುವಾಡ, ತಾಲ್ಲೂಕು & ಜಿಲ್ಲೆ ದಾವಣಗೆರೆ | 4750 | Nil |
| | **ಗದಗ ಜಿಲ್ಲೆ** | | |
| 52 | ವಿಜಯನಗರ ಶುಗರ್ಸ್ ಪ್ರೈ, ಲಿಮಿಟೆಡ್, (ಮೃದಗಿರಿ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್ ನ ಗುತ್ತಿಗೆದಾರರು), ಗಂಗಾಪುರ ಗ್ರಾಮ ತಾಲ್ಲೂಕು: ಮುಂಡರಗಿ, ಜಿಲ್ಲೆ ಗದಗ. | 5000 | 150.00 |
| | **ಹಾಸನ ಜಿಲ್ಲೆ** | | |
| 53 | ಚಾಮುಂಡೇಶ್ವರಿ ಶುಗರ್ಸ್ ಲಿ., (ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ಶ್ರೀನಿವಾಸಪುರ ತಾಲ್ಲೂಕು: ಚನ್ನರಾಯಪಟ್ಟಣ ಜಿಲ್ಲೆ:ಹಾಸನ | 3500 | Nil |
| | **ಹಾವೇರಿ ಜಿಲ್ಲೆ** | | |
| 54 | ಜಿಎಂ ಶುಗರ್ ಅಂಡ್ ಎನರ್ಜಿ ಲಿ.,(ಗುತ್ತಿಗೆದಾರರು ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,) ಸಂಗೂರು, ತಾಲ್ಲೂಕು ಮತ್ತು ಜಿಲ್ಲೆ ಹಾವೇರಿ. | 4800 | Nil |
| 55 | ಜಿಎಂ ಶುಗರ್ ಅಂಡ್ ಎನರ್ಜಿ ಲಿ., ಯುನಿಟ್-2, ಚಟ್ಟಹಳ್ಳಿ ಗ್ರಾಮ, ತಾಲ್ಲೂಕು: ರಟ್ಟೆ ಹಳ್ಳಿ, ಜಿಲ್ಲೆ: ಹಾವೇರಿ | 10000 | 510.00 |
| 56 | ವಿ.ಐ.ಎನ್.ಪಿ ಡಿಸ್ಟಲರೀಸ್ & ಶುಗರ್ಸ್ ಪ್ರೈ ಲಿ., ಕೋಣನಕೆರೆ ಗ್ರಾಮ, ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆ. | 3500 | 300.00 |
| | **ಕಲಬುರಗಿ ಜಿಲ್ಲೆ** | | |
| 57 | ಕೆಪಿಆರ್ ಶುಗರ್ & ಅಪ್ಪರೆಲ್ಸ್ ಲಿ., ಚಿನ್ನಮ್ಮಗೆರಿ ಗ್ರಾಮ, ಚೌಡಾಪುರ, ತಾಲ್ಲೂಕು: ಅಫಜಲಪುರ ಜಿಲ್ಲೆ: ಕಲಬುರಗಿ | 10000 | 220.00 |
| 58 | ಎನ್ಎಸ್ಎಲ್ ಶುಗರ್ಸ್ (ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆ ಗುತ್ತಿಗೆದಾರರು) ಭೂಸನೂರ್, ತಾಲ್ಲೂಕು: ಆಳಂದ, ಜಿಲ್ಲೆ: ಕಲಬುರಗಿ | 7500 | Nil |
| 59 | ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್, ಯುನಿಟ್-5, ಹವಳಗಾ ಗ್ರಾಮ, ತಾಲ್ಲೂಕು: ಅಫ್‌ಜಲಪುರ, ಜಿಲ್ಲೆ: ಕಲಬುರಗಿ. | 9000 | 300.00 |
| 60 | ಸಿದ್ಧಸಿರಿ ಸೌಹಾರ್ದ ಸಹಕಾರಿ ನಿಯಮಿತ, ತಾಲ್ಲೂಕು: ಚಿಂಚೋಳಿ, ಜಿಲ್ಲೆ: ಕಲಬುರಗಿ | 5000 | 423.00 |
| 61 | ದಿ ಉಗಾರ್ ಶುಗರ್ ವರ್ಕ್ಸ್ ಲಿ, ನಾಗರಹಳ್ಳಿ, ಮಲ್ಲಿ, ತಾಲ್ಲೂಕು: ಜೇವರ್ಗಿ, ಜಿಲ್ಲೆ: ಕಲಬುರಗಿ | 2500 | Nil |
| | **ಮಂಡ್ಯ ಜಿಲ್ಲೆ** | 4800 | Nil |
| 62 | ಕೋರಮಂಡಲ್ ಶುಗರ್ಸ್ ಲಿ., ಮಾಕವಳ್ಳಿ, ತಾಲ್ಲೂಕು: ಕೆ.ಆರ್.ಪೇಟೆ ಜಿಲ್ಲೆ: ಮಂಡ್ಯ | 5000 | 36.00 |
| 63 | ಮೈಸೂರು ಸಕ್ಕರೆ ಕಂಪನಿ ನಿ., ಸಕ್ಕರೆ ನಗರ, ಮಂಡ್ಯ | | |
| 64 | ಎಂ.ಆರ್.ಎನ್ ಕೇನ್ ಪವರ್ ಅಂಡ್ ಬಯೋರಿಫೈನರೀಸ್ ಪ್ರೈ ಲಿ, (ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ತಾಲ್ಲೂಕು: ಪಾಂಡವಪುರ, ಜಿಲ್ಲೆ: ಮಂಡ್ಯ | 3500 | Nil |
| 65 | ಎನ್.ಎಸ್.ಎಲ್ ಶುಗರ್ಸ್, ಕೊಪ್ಪ, ತಾಲ್ಲೂಕು: ಮದ್ದೂರು, ಜಿಲ್ಲೆ:ಮಂಡ್ಯ | 5000 | 60.00 |
| 66 | ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ, ಭಾರತಿ ನಗರ, ತಾಲ್ಲೂಕು: ಮದ್ದೂರು, ಜಿಲ್ಲೆ:ಮಂಡ್ಯ | 5000 | 50.00 |
| | **ಮೈಸೂರು ಜಿಲ್ಲೆ** | 7500 | 150.00 |
| 67 | ಬನ್ನಾರಿ ಅಮ್ಮನ್ ಶುಗರ್ಸ ಲಿ, ಅಲಗಂಚಿ ಗ್ರಾಮ, ತಾಲ್ಲೂಕು: ನಂಜನಗೂಡು, ಜಿಲ್ಲೆ: ಮೈಸೂರು | | |
| | **ಉತ್ತರ ಕನ್ನಡ ಜಿಲ್ಲೆ** | 11500 | 170.00 |
| 68 | ಇಐಡಿ ಪ್ಯಾರಿ (ಇಂಡಿಯಾ) ಲಿ., ಹುಲ್ಲಟ್ಟಿ ಗ್ರಾಮ, ಹಲಿಯಾಲ, ಉತ್ತರ ಕನ್ನಡ ಜಿಲ್ಲೆ, | | |
| | **ವಿಜಯಪುರ ಜಿಲ್ಲೆ** | | |
| 69 | ಇಂಡಿಯನ್ ಶುಗರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿ., ಹಾವಿನಾಳ್, ತಾಲ್ಲೂಕು: ಇಂಡಿ, ಜಿಲ್ಲೆ: ವಿಜಯಪುರ. | 4800 | 60.00 |
| 70 | ಜಮಖಂಡಿ ಶುಗರ್ಸ್ ಲಿಮಿಟೆಡ್, ಘಟಕ-2, ನಾದ್‌ಕೆಡಿ, ತಾಲ್ಲೂಕು: ಇಂಡಿ, ಜಿಲ್ಲೆ: ವಿಜಯಪುರ | 3500 | Nil |
| 71 | ಕೆಪಿಆರ್ ಶುಗರ್ ಮಿಲ್ ಲಿ., ಆಲುಮೇಲು ಗ್ರಾಮ, ತಾಲ್ಲೂಕು: ಸಿಂದಗಿ, ಜಿಲ್ಲೆ: ವಿಜಯಪುರ. | 10000 | 240.00 |
| 72 | ಶ್ರೀ ಸಾಯಿಬಸವ ಶುಗರ್ಸ್ ಲಿಮಿಟೆಡ್, ಪೋಸ್ಟ್:ಮಲಘಾಣ, ತಾಲ್ಲೂಕು: ಆಲುಮೇಲು, ಜಿಲ್ಲೆ: ವಿಜಯಪುರ | 5000 | Nil |

| | | | |
|---|---|---|---|
| 73 | ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕೃಷ್ಣಾನಗರ, ಪೋಸ್ಟ್: ಹೊಸೂರು, ತಾಲ್ಲೂಕು: ಬಬಲೇಶ್ವರ, ಜಿಲ್ಲೆ : ವಿಜಯಪುರ. | 10000 | 50.00 |
| 74 | ಸಂಗಮನಾಥ ಶುಗರ್ಸ್ ಲಿಮಿಟೆಡ್, ಯರಗಲ್ ಬಿ.ಕೆ. ತಾಲ್ಲೂಕು: ಸಿಂದಗಿ, ಜಿಲ್ಲೆ: ವಿಜಯಪುರ | 7000 | Nil |
| 75 | ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ಸ್ ಪ್ರೈ ಲಿಮಿಟೆಡ್, ಯರಗಲ ತಾಲ್ಲೂಕು: ಮುದ್ದೇಬಿಹಾಳ, ಜಿಲ್ಲೆ: ವಿಜಯಪುರ | 10000 | 180.00 |
| 76 | ಶ್ರೀ ಬಸವೇಶ್ವರ ಶುಗರ್ಸ್ ಲಿಮಿಟೆಡ್, ಕಾರಜೋಳ ಗ್ರಾಮ, ಜಿಲ್ಲೆ: ವಿಜಯಪುರ | 7000 | 120.00 |
| 77 | ಶ್ರೀ ಭೀಮಾಶಂಕರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಮರಗೂರ, ತಾಲ್ಲೂಕು:ಇಂಡಿ, ಜಿಲ್ಲೆ: ವಿಜಯಪುರ. | 3500 | Nil |
| 78 | ಇಂಡಿಯನ್ ಕೇನ್ ಪವರ್ ಲಿ. ಘಟಕ: ಧ್ಯಾನಯೋಗಿ ಶ್ರೀ ಶಿವಕುಮಾರಸ್ವಾಮಿಜಿ ಶುಗರ್ಸ್ ಲಿಮಿಟೆಡ್, ಹಿರೇಬೇಮನೂರು ಗ್ರಾಮ, ತಾಲ್ಲೂಕು : ಇಂಡಿ ಜಿಲ್ಲೆ: ವಿಜಯಪುರ | 3500 | Nil |
| | **ವಿಜಯನಗರ ಜಿಲ್ಲೆ** | | |
| 79 | ಮೈಲಾರ ಶುಗರ್ಸ್ ಲಿ., ಬೀರಬ್ಬಿ, ತಾಲ್ಲೂಕು: ಹೂವಿನಹಡಗಲಿ, ಜಿಲ್ಲೆ :ವಿಜಯನಗರ | 10000 | 120.00 |
| 80 | ಶ್ಯಾಮನೂರು ಶುಗರ್ಸ್ ಲಿ., ದುಗ್ಗಾವತಿ, ತಾಲ್ಲೂಕು: ಹರಪನಹಳ್ಳಿ, ಜಿಲ್ಲೆ:ವಿಜಯನಗರ | 2500 | 120.00 |
| | **ಯಾದಗಿರಿ ಜಿಲ್ಲೆ** | | |
| 81 | ಕೋರ್‌ಗ್ರೀನ್ ಶುಗರ್ & ಫ್ಯುಯೆಲ್ಸ್ ಪ್ರೈ. ಲಿಮಿಟೆಡ್. ತುಮಕೂರು ಗ್ರಾಮ, ತಾಲ್ಲೂಕು:ವಡೇಗೆರೆ, ಜಿಲ್ಲೆ: ಯಾದಗಿರಿ | 5000 | 50.00 |

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು